ಇ) ಹಾಗಿದ್ದಲ್ಲಿ ನೀಡಲಾದ ಮೊತ್ತವೆಷ್ಟು?

ಶ್ರೀ ಎಸ್. ಕುಮಾರ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ನೀರು ಬಳಕೆದಾರರ ಸಹಕಾರ ಸಂಘಗಳು 571 ನೊಂದಾವಣೆಯಾಗಿರುತ್ತದೆ.

ಆ), ಇ) ರಚಿತವಾಗಿರುವ ಸಹಕಾರ ಸಂಘಗಳು ಸಾಮಾನ್ಯ ಸಭೆ ನಡೆಸಿ, ಅಧ್ಯಕ್ಷರು, ಉಪಾಧ್ಯಕ್ಷರುಗಳನ್ನು ಆಯ್ಕೆ ಮಾಡಿರುತ್ತವೆ. ಹೂಳೆತ್ತುವ ಕಾಮಗಾರಿಗಳಿಗೆ ಯಾವ ಸಂಘಗಳಿಗೂ ಹಣಕಾಸು ಬಿಡುಗಡೆಯಾಗಿರವುದಿಲ್ಲ.

ಹೊಳೆ ಹೊನ್ನೂರು ಕ್ಷೇತ್ರದ ಕೆಲವು ಭಾಗಗಳಲ್ಲಿ ಸೇತುವೆ ಮತ್ತು ಕಲ್‌ವರ್ಟ್‌ಗಳ ರಿಪೇರಿ.

2357(2840) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭದ್ರಾ ಬಲದಂಡೆ ಹೊಳೆಹೊನ್ನೂರು ಕ್ಷೇತ್ರದ (ಭದ್ರಾವತಿ ತಾಲ್ಲೂಕು) ಕೆಲವು ಭಾಗದಲ್ಲಿ ಸುಮಾರು 4 ಸೇತುವೆಗಳು ರಿಪೇರಿ ಆಗದೆ ಬಿದ್ದಿರುತ್ತವೆ ಇವುಗಳನ್ನು ಯಾವಾಗ ರಿಪೇರಿ ಮಾಡಲಾಗುವುದು.

ಈ ವಿಭಾಗದಲ್ಲಿ ಬಿದ್ದಿರುವ ಕಲ್‌ವರ್ಟುಗಳು ಮತ್ತು ಆಕ್ಷಡೀಟ್‌ಗಳ ರಿಪೇರಿಗಳನ್ನು ಯಾವಾಗ ಮಾಡಲಾಗುವುದು ಈ ರಿಪೇರಿಗೆ ಹಣವಿಲ್ಲವೆಂದು ಸಂಬಂಧಪಟ್ಟವರು ತಿಳಿಸುತ್ತಿರುವುದು ಸತ್ಯವೇ?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ಈ ಸಾಲಿನಲ್ಲಿ ಸದರಿ ನಾಲ್ಕು ಸೇತುವೆಗಳ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಕಾಮಗಾರಿಗಳ ಅಗತ್ಯತೆಯನ್ನು ಪರಿಗಣಿಸಿ ಈ ವರ್ಷವೇ ದುರಸ್ತಿ ಕಾರ್ಯವನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಳ್ಳಲಾಗುವುದು.

ಭದ್ರಾ ಡ್ಯಾಂ ಕೆಳಗೆ ಬರುವ ಬಲದಂಡೆ ಮತ್ತು ಎಡದಂಡೆ ಚಾನಲ್ ಮತ್ತು ಸೇತುವೆ ಹಾಗೂ ಕಲ್‌ವರ್ಟುಗಳ ರಿಪೇರಿ.

2369(2842) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭದ್ರಾ ಡ್ಯಾಂ ಕೆಳಗಡೆ ಬರುವ ಬಲದಂಡೆ ನಾಲೆ ಮತ್ತು ಎಡದಂಡೆ ನಾಲೆಯ ತುಂಬಾ "ನಾ"ದುರಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಅ) ಈ ನಾಲೆಗಳಲ್ಲಿ ನೀರನ್ನು ನಿಲ್ಲಿಸಿದಾಗ ಇದರ ರಿಪೇರಿಯನ್ನು ಸಮರ್ಪಕವಾಗಿ ಮಾಡುತ್ತಿಲ್ಲದಿರುವುದು ನಿಜವೆ; ಹಾಗಿದ್ದಲ್ಲಿ, ನಾಲೆ ನೀರು ನಿಲ್ಲಿಸಿದಾಗ ರಿಪೇರಿ ಮಾಡದಿರಲು ಕಾರಣವೇನು;

ಇ) ಈ ಚಾನಲ್ ಮೇಲೆ ಇರುವ ಸಂಪರ್ಕ ಸೇತುವೆಗಳು ಮತ್ತು ಕಲ್ವರ್ಟುಗಳು ಹಾಗೂ ಅಕ್ವಡೇಟ್‌ಗಳು ಎರಡು ವರ್ಷದಿಂದ ಬಿದ್ದಿರುವುದನ್ನು ಈವರೆಗೆ ರಿಪೇರಿ ಮಾಡದಿರಲು ಕಾರಣವೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ಬಂದಿದೆ.

ಆ) ಪ್ರತಿ ವರ್ಷವೂ ನಾಲೆಗಳಲ್ಲಿ ನೀರನ್ನು ನಿಲ್ಲಿಸಿದ ಅವಧಿಯಲ್ಲಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಂಡ ದುರಸ್ತಿ ಕಾರ್ಯವನ್ನುಸಮರ್ಪಕವಾಗಿ ಮಾಡಲಾಗುತ್ತಿದೆ.

ಇ) ಕಾಮಗಾರಿಗಳ ಆಗತ್ಯತೆಯನ್ನು ಪರಿಗಣಿಸಿ ದುರಸ್ತಿ ಕಾರ್ಯವನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ಈ ವರ್ಷವೇ ಕೈಗೊಳ್ಳಲಾಗುವುದು.

ಭದ್ರಾ ನಾಲೆಗಳ ವ್ಯಾಪ್ತಿಗೆ ನೀರುಗಂಟೆಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.

2360(2843) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭದ್ರಾ ನಾಲೆಗಳ ವ್ಯಾಪ್ತಿಗೆ ನೀರುಗಂಟೆಗಳನ್ನು ನೇಮಕ ಮಾಡುವ ಅವಕಾಶವೇನಾದರೂ ಸರ್ಕಾರದ ತೀರ್ಮಾನದಲ್ಲಿಯೇ;

ಆ) ಹಾಗಿಲ್ಲದಿದ್ದರೆ ಈಗ ಇರುವ ನೀರುಗಂಟೆಗಳು ಅಥವಾ ಸೌಡಿಗಳಿಗೆ ನಾಲೆಗಳ ರಿಪೇರಿ ಹಣದಿಂದ ಸಂಬಳ ಕೊಡುತ್ತಿರುವುದರಿಂದ ನಾಲೆ ರಿಪೇರಿ ಕುಂಠಿತಗೊಳ್ಳುವುದಿಲ್ಲವೆ ಇದಕ್ಕೆ ಪರ್ಯಾಯ ವ್ಯವಸ್ಥೆ ಎನು?

ಇ) ನೀರುಗಂಟೆ ಅಥವಾ ಸೌಡಿಗಳು ಇಲ್ಲದಿದ್ದರೆ ನಾಲೆಯ ಕೆಲಸಗಳಿಗೆ ತೊಂದರೆಯಾಗುವುದಿಲ್ಲವೆ? ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ಇಲ್ಲ. ನೀರಾವರಿ ಯೋಜನೆಗಳಲ್ಲಿ ನೀರು ವಿತರಣಾ ವ್ಯವಸ್ಥೆಯನ್ನು ನೀರು ಬಳಕೆದಾರರ ಸಂಘಗಳಿಗೆ ವಹಿಸಿಕೊಡುವುದು ಸರ್ಕಾರದ ನಿಲುವಾಗಿದೆ. ನೀರು ಬಳಕೆದಾರರ ಸಂಘಗಳು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾಗುವವರೆಗೆ ಈಗಿರುವ ವ್ಯವಸ್ಥೆಯನ್ನು ಮುಂದುವರೆಸಲಾಗುವುದು